# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ
# ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ.16/2020**

**ದೋ.ಸಾ. : 04 ಪ್ರಾ.ಸಾ. : 02**

| | | |
|---|---|---|
| ಸಾಕ್ಷಿಯ ಹೆಸರು | : | ಮಂಜುನಾಥ ಮಂಗಳ ಗೊಂಡ |
| ತಂದೆಯ ಹೆಸರು | : | ಮಂಗಳ ಗೊಂಡ |
| ವಯಸ್ಸು | : | 42 ವರ್ಷ |
| ಕೆಲಸ | : | ಕೂಲಿ ಕೆಲಸ |
| ವಾಸ | : | ನೂಜ್, ತಾಃ ಭಟ್ಕಳ |

**ದಿನಾಂಕಃ 06-06-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ಹೀಗೆ ಸುಮಾರು 4 ವರ್ಷಗಳ ಹಿಂದೆ ನಾನು ಶಿರೂರಗೆ ಹೋಗಿ ವಾಪಸ್ ಬರುತ್ತಿರುವಾಗ ನೂಜ್ ರಸ್ತೆಯ ಮೇಲೆ ಪೊಲೀಸರು ಎರಡು ದಾಖಲೆಗಳ ಮೇಲೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಅವುಗಳಲ್ಲಿ ಏನು ಬರೆಯಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ದಾಖಲೆಗಳು ಪೈಕಿ ಒಂದು ಪಂಚನಾಮೆ ಹಾಗೂ ಇನ್ನೊಂದು ನಕಾಶೆಯಾಗಿದ್ದು, ಪಂಚನಾಮೆಯನ್ನು ನಿಪಿ-10 ಎಂದು, ನಕಾಶೆಯನ್ನು ನಿಪಿ-11 ಎಂದು ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ-10(ಎ) ಮತ್ತು ನಿಪಿ-11(ಎ) ಎಂದು ಗುರುತಿಸಲಾಯಿತು. ನಿಪಿ-9 ಪೋಟೋದಲ್ಲಿ ಸಾಕ್ಷಿಯು ತನ್ನ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಪೋಟೋವನ್ನು ನೂಜ್ ನ ಒಂದು ತೋಟದಲ್ಲಿ ತೆಗೆದಿರುತ್ತಾರೆ ಎಂದು ನುಡಿಯುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸರಕಾರಿ ಅಭಿಯೋಜಕರಿಂದಃ**

2. ದಿಃ 20-12-2019 ರಂದು ಭಟ್ಕಳ ಗ್ರಾಮೀಣ ಪೊಲೀಸರು ನನ್ನನ್ನು ನೂಜ್ ಅಡಿಬಾರ್ ನ ಶ್ರೀಮತಿ ಮಳ್ಳಿ ಸೋಮಯ್ಯ ಗೊಂಡ ರವರಿಗೆ ಸೇರಿದ ಸರ್ವೆ ನಂಃ 4, ಹಿಸ್ಸಾ 1 ರಲ್ಲಿ ಪಂಚನಾಮೆಗಾಗಿ ನಮ್ಮನ್ನು ಕರೆದಿದ್ದರು ಎಂದರೆ ಸಾಕ್ಷಿಯು ಸಹಿ ಹಾಕಲು ಕರೆದಿದ್ದರು ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ನಾನು ಮತ್ತು ಚಾಸಾ-5 ರವರು ಸ್ಥಳದಲ್ಲಿ ಹಾಜರಿದ್ದೆವು ಎಂದರೆ ಸರಿ. ಸ್ಥಳದಲ್ಲಿ ಚಾಸಾ-11 ರವರೂ ಸಹ ಹಾಜರಿದ್ದು, ಆರೋಪಿಯು ಮೃತೆ ಇಂದಿರಾಳಿಗೆ ಮಾನಸಿಕವಾಗಿ ಹಾಗೂ ದೈಹಿಕವಾಗಿ ಹಿಂಸೆ ನೀಡಿ, ಆತ್ಮಹತ್ಯೆ ಮಾಡಿಕೊಳ್ಳಲು ದುಷ್ಪ್ರೇರಣೆ ನೀಡಿದ ಮೇರೆಗೆ, ಆಕೆಯು ತನ್ನ ಅತ್ತೆಗೆ ಸೇರಿದ ಜಮೀನಿನಲ್ಲಿರುವ ತೋಟದ ಕೆರೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿರುತ್ತಾಳೆ ಎಂದು ತೋರಿಸಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಚಾಸಾ-11 ರವರು ಸ್ಥಳವನ್ನು ತೋರಿಸಿದ ಮೇರೆಗೆ, ಪೊಲೀಸರು ಮದ್ಯಾಹ್ನ 01-00 ರಿಂದ 02-00 ಗಂಟೆಯ ವರೆಗೆ ನಿಪಿ-10 ರಂತೆ ಪಂಚನಾಮೆ ಮಾಡಿ, ನಿಪಿ-11 ರಂತೆ ನಕಾಶೆಯನ್ನು ತಯಾರಿಸಿ, ನಮ್ಮ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಯಾವ ಕಾರಣಕ್ಕಾಗಿ ಸಹಿಯನ್ನು ಪಡೆದುಕೊಂಡರು ಎಂದು ನುಡಿಯುತ್ತಾರೆ. ಅದೇ ರೀತಿ ಪಂಚನಾಮೆಯ ಸಮಯದಲ್ಲಿ ಪೊಲೀಸರು ನಿಪಿ-9 ರಂತೆ ಪೋಟೋವನ್ನು ತೆಗೆದರು ಎಂದರೆ ಸರಿ. ಅದೇ ಸ್ಥಳದಲ್ಲಿ ನಿಪಿ-10 ಪಂಚನಾಮೆ ಮತ್ತು 11 ನಕಾಶೆಗೆ ನನ್ನ ಸಹಿಯನ್ನು ಪಡೆದುಕೊಂಡರು ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಜಿ.ಟಿ.ಎನ್ ವಕೀಲರಿಂದ**

3. ನಿಪಿ-10 ಪಂಚನಾಮೆಯಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ಅದೇ ರೀತಿ ನಿಪಿ-11 ರಲ್ಲಿ ಏನಿದೆ ಹಾಗೂ ಅದು ಯಾವ ಸ್ಥಳಕ್ಕೆ ಸಂಬಂಧಿಸಿದ್ದು ಎಂದು ಗೊತ್ತಿಲ್ಲ ಎಂದರೆ ಸರಿ. ನಿಪಿ-9 ಪೋಟೋವನ್ನು, ನಿಪಿ-10 ದಾಖಲೆಗೆ ಸಹಿ ಮಾಡಿದ ದಿನವೇ ತೆಗೆದ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ-9 ಪೋಟೋವನ್ನು, ನಿಪಿ-10 ದಾಖಲೆಗೆ ಸಹಿ ಮಾಡಿದ ದಿನದಂದು ತೆಗೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-9 ಪೋಟೋವನ್ನು ಯಾರು, ಯಾಕೆ ಹಾಗೂ ಎಲ್ಲಿ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ-9 ಪೋಟೋದಲ್ಲಿ ಕಾಣುತ್ತಿರುವ ಜಾಗದಲ್ಲಿ ನಾನು ನಿಪಿ-10 ಕ್ಕೆ ಸಹಿ ಮಾಡಿಲ್ಲ ಎಂದರೆ ಸರಿ.

**<u>ಮರು ವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ